# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ

# ಬಳ್ಳಾರಿ

## ಸತ್ರ ಮೊಕದ್ದಮೆ ಸಂಖ್ಯೆಃ 34/2025

**ಪಿ.ಡಬ್ಲ್ಯೂಃ 15 , ಸಾಕ್ಷಿ 2**

**ಸಾಕ್ಷಿದಾರರ ಹೆಸರು : ಡಾ. ಶಿವನಾಯಕ್**
**ತಂದೆಯ ಹೆಸರು : ಎಂ.ರಾಮ್ ಜೀನಾಯಕ್**
**ವಯಸ್ಸು : 51 ವರ್ಷ**
**ಕೆಲಸ : ಮೆಡಿಕಲ್ ಸೂಪರಿಂಟೆಂಡೆಂಟ್ ಟ್ರಾಮಾಕೇರ್ ಸೆಂಟರ್ , ಬಳ್ಳಾರಿ**
**ವಾಸ ಸ್ಥಳ : ಬಳ್ಳಾರಿ**

**ಸಾಕ್ಷಿಯನ್ನು ದಿನಾಂಕ 10.7.2026 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನಾನು ಬಳ್ಳಾರಿಯ ವಿಮ್ಸ್ ಆಸ್ಪತ್ರೆಯಲ್ಲಿ ಕೀಲು ಮತ್ತು ಎಲುಬು ಶಾಖೆಯ ಪ್ರಾಧ್ಯಾಪಕರಾಗಿ 2007 ರಿಂದ ಈವರೆವಿಗೂ ಕೆಲಸ ನಿರ್ವಹಿಸುತ್ತಿದ್ದೇನೆ.

**2.** ಪ್ರಕರಣದ ಗಾಯಾಳು ಸಾಕ್ಷಿ ಮೂಕಮ್ಮ ದಿಃ27.2.2025 ರಂದು ಹಲ್ಲೆಯ ಹಿನ್ನೆಲೆಯಲ್ಲಿ ನಾನು ಕೆಲಸ ನಿರ್ವಹಿಸುತ್ತಿದ್ದ ವಿಭಾಗದಲ್ಲಿ ಚಿಕಿತ್ಸೆ ಸಲುವಾಗಿ ದಿಃ2.3.2025 ರಂದು ದಾಖಲಾಗಿದ್ದರು. ಅವರ ದೇಹದ 2 ಕೈತೋಳುಗಳ (upper Limb) ಭಾಗದಲ್ಲಿ ಗಾಯಾಳು ಆಗಿದ್ದು ಗಾಯಾಳುವನ್ನು ಕ್ಷಕಿರಣ ತಪಾಸಣೆಗೆ ಒಳಪಡಿಸಿದಾಗ ಆಕೆಯ ಎಡ ಕೈನ ರೇಡಿಯಸ್ ಭಾಗ ಮುರಿತಕ್ಕೆ ಒಳಪಟ್ಟಿದ್ದು ಕಂಡು ಬಂತು. ಸದರಿ ಎಡ ರೇಡಿಯಸ್

ಮುರಿಯುವಿಕೆಯ ಹಿನ್ನೆಲೆಯಲ್ಲಿ ಗಾಯಾಳುವನ್ನು ದಿಃ3.3.2025 ರಂದು ಶಸ್ತ್ರ ಚಿಕಿತ್ಸೆಗೆ ಒಳಪಡಿಸಲಾಯಿತು. ನಂತರ ದಿಃ11.3.2025 ರಂದು ಆಕೆ ಚಿಕಿತ್ಸಾ ಕ್ರಮದಿಂದ ಬಿಡುಗಡೆ ಹೊಂದಿರುತ್ತಾರೆ.

**3.** ಸದರಿ ಗಾಯಾಳುವಿನ ಚಿಕಿತ್ಸಾ ಕ್ರಮ ಕುರಿತಂತೆ ನಾನು ದಾಖಲಾತಿಗಳನ್ನು ನೀಡಿದ್ದು ಅವುಗಳು ಈಗ ನನಗೆ ತೋರಿಸಿದ ದಾಖಲೆಗಳಾಗಿದೆ. 19 ಪುಟಗಳ ಒಟ್ಟಾರೆ ದಾಖಲೆಯನ್ನು ಈಗ **ನಿಪಿ.29** ಎಂದು ಗುರುತು ಮಾಡಲಾಯಿತು. ಚಿಕಿತ್ಸಾ ಬಿಡುಗಡೆ ಪತ್ರದ ದಾಖಲೆಯು ನಿಪಿ.29 ರ ಭಾಗವಾಗಿದ್ದು, ಚಿಕಿತ್ಸಾ ಬಿಡುಗಡೆ ಪತ್ರ ದಾಖಲೆಯಲ್ಲಿ ನನ್ನ ರುಜು ಇದ್ದು ಅದನ್ನು ಈಗ **ನಿಪಿ.29(ಎ)** ಎಂದು ಗುರುತು ಮಾಡಲಾಯಿತು.

## ಪಾಟೀಸವಾಲುಃ ಆರೋಪಿ ಪರ ಶ್ರೀಮತಿ ಹೆಚ್.ಆರ್.ಜೆಃ ( ಎಲ್.ಎ.ಡಿಸಿ) ವಕೀಲರಿಂದ:

**4.** ನಾನು ಪ್ರಥಮ ಬಾರಿಗೆ ಗಾಯಾಳುವನ್ನು ದಿಃ 2.3.2025 ರಂದು ತಪಾಸಣಾ ಕ್ರಮಕ್ಕೆ ಒಳಪಡಿಸಿದ್ದೆನು. ನಾನು ಗಾಯಾಳುವನ್ನು ಶಸ್ತ್ರ ಚಿಕಿತ್ಸೆ ಕ್ರಮಕ್ಕೆ ಒಳಪಡಿಸಿದಾಗ ಕೇವಲ ಮುರಿತಕ್ಕೆ ಒಳಪಟ್ಟ ದೇಹದ ಭಾಗಕ್ಕೆ ಮಾತ್ರ ಮಂಪರು ಕ್ರಮವನ್ನು ಕೈಗೊಂಡಿದ್ದೆನು. ಆದರೆ ಸದರಿ ಕ್ರಮ ಅಲ್ಪ ಪ್ರಮಾಣದ ಶಸ್ತ್ರ ಚಿಕಿತ್ಸಾ ಕ್ರಮದಲ್ಲಿ ಮಾತ್ರ ಕೈಗೊಳ್ಳಲಾಗುತ್ತದೆ ಎಂದರೆ ಸರಿಯಲ್ಲ. ನಾನು ಶಸ್ತ್ರ ಚಿಕಿತ್ಸಾ ಕ್ರಮವನ್ನು ಅಂದಾಜು 1 ಗಂಟೆ ಕಾಲ ಅಂದರೆ ಮಧ್ಯಾಹ್ನ 2.30 ರಿಂದ ಮಧ್ಯಾಹ್ನ 3.30 ರ ವರೆವಿಗೂ ಕೈಗೊಂಡಿರುತ್ತೇನೆ. ಶಸ್ತ್ರ ಚಿಕಿತ್ಸಾ ಕಾಲಕ್ಕೆ ಗಾಯಾಳುವಿನ ರಕ್ತದೊತ್ತಡ ಹಾಗೂ ಇತ್ಯಾದಿಗಳು ಸಮರ್ಪಕವಾಗಿದ್ದವು.

**S.C.No. 34/2025**
**P.W.15**
**Date :10.7.2026**

5. ನಾನು ಉಲ್ಲೇಖಿಸಿದ ಎಡ ರೇಡಿಯಸ್ ಮುರಿತವು, ಗಾಯಾಳು ತನ್ನ ಅಜಾಗರೂಕತೆಯಿಂದ ಒರಟು ಮೇಲ್ಮೈವುಳ್ಳ ನೆಲದ ಮೇಲೆ ಬಿದ್ದಾಗ ಸಂಭವಿಸುವ ಸಾಧ್ಯತೆ ಇದೆ ಎಂದರೆ ಇರಬಹುದು. ಸಾಮಾನ್ಯವಾಗಿ 45 ವರ್ಷ ಪ್ರಾಯವುಳ್ಳ ವ್ಯಕ್ತಿ ತನ್ನ ಅಜಾಗರೂಕತೆಯಿಂದ ಬಿದ್ದಾಗ ನಾನು ಗಮನಿಸಿದ ಮೂಳೆ ಮುರಿತದ ಗಾಯ ಮೂಳೆಯ ಗಟ್ಟಿತನದಲ್ಲಿ ಕ್ಷೀಣಿಸುವಿಕೆಯ ಹಿನ್ನೆಲೆಯಲ್ಲಿ ಸಂಭವಿಸುವ ಸಾಧ್ಯತೆ ಇರುತ್ತದೆ ಎಂದರೆ ಸರಿಯಲ್ಲ. ನಾನು ಕೇವಲ ದಾಖಲಾತಿಗಳ ಆಧಾರದ ಮೇಲೆ ಸಾಕ್ಷಿ ನುಡಿದೆ ಎಂದರೆ ಸರಿಯಲ್ಲ.

**ಮರು-ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

**ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)**

**ಓ.ಹೇ.ಕೆ. ಸರಿ ಇದೆ.**

\

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಬಳ್ಳಾರಿ.**